# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 97/2023

ಪಿಡಬ್ಲ್ಯೂ: 02
ಸಿಡಬ್ಲ್ಯೂ: 04

**<u>ದಿನಾಂಕಃ 29-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | |
|---|---|
| ಸಾಕ್ಷಿದಾರರ ಹೆಸರು | ಃ ಶಿವಲಿಂಗಪ್ಪ |
| ತಂದೆಯ ಹೆಸರು | ಃ ಯಳಿಯಪ್ಪ |
| ವಯಸ್ಸು | ಃ 29 ವರ್ಷ |
| ಉದ್ಯೋಗ | ಃ ವ್ಯಾಪಾರ |
| ವಾಸ ಸ್ಥಳ | ಃ ಜೋಡಿಶ್ರೀರಾಂಪುರ ಗೊಲ್ಲರಹಟ್ಟಿ |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

ನನಗೆ ಪ್ರಾಸಾ–**1** / ಬಸವರಾಜ್ ಹಾಗೂ ಚಾಸಾ–**5**/ ರಂಗನಾಥ ಇವರ ಗುರುತು ಇದೆ. ಅದೇ ರೀತಿ ಆರೋಪಿತರ ಗುರುತು ಕೂಡಾ ಇದೆ. ದಿನಾಂಕ **07–11–2022** ರಂದು ನಾನು ಮತ್ತು ರಂಗನಾಥ ಜೋಡಿ ಶ್ರೀರಾಂಪುರ ಗೊಲ್ಲರಹಟ್ಟಿಯಿಂದ ಹೊಸದುರ್ಗಕ್ಕೆ ಬರುತ್ತಿದ್ದೆವು, ಆಗ ಸಂಜೆ **4.30** ಗಂಟೆಯಾಗಿತ್ತು. ಹೊಸದುರ್ಗದ ಬಳಿ ಅರಣ್ಯ ಇಲಾಖೆ ಕಛೇರಿ ಬಳಿ ಗಲಾಟೆಯಾಗುತ್ತಿತ್ತು. ನಮಗೆ ಆರೋಪಿತರು ಹಾಗೂ ಬಸವರಾಜ್ ಗೊತ್ತಿದ್ದ ಕಾರಣ ಅವರ ಬಳಿ ಹೋದೆವು. ಅಲ್ಲಿ ನೋಡಲಾಗಿ **2** ಮತ್ತು **3** ನೇ ಆರೋಪಿತರು ಬಸವರಾಜನನ್ನು ಹಿಡಿದುಕೊಂಡಿದ್ದರು. ನಾವು ಅಲ್ಲಿಗೆ ಹೋಗುವಷ್ಟರಲ್ಲಿ **1** ನೇ ಆರೋಪಿ ಬಸವರಾಜನ ಎಡ ಹುಬ್ಬಿನ ಮೇಲೆ ಮತ್ತು ಹೊಟ್ಟೆಯ ಭಾಗದಲ್ಲಿ ಬ್ಲೇಡಿನಿಂದ ಗಾಯಪಡಿಸಿದ್ದ. ಆಗ **1** ನೇ ಆರೋಪಿ ನಾವು ಬಂದಿದ್ದನ್ನು ನೋಡಿ ಈ ದಿನ ಶಿವಲಿಂಗ ಮತ್ತು ರಂಗನಾಥ ಬಂದಿದ್ದಾರೆ ಕಾರಣ ನಿನ್ನನ್ನು ಬಿಡುತ್ತಿದ್ದೇನೆ ಮತ್ತು ಒಂದಿಲ್ಲೊಂದು ದಿನ ಕೊಲೆ ಮಾಡುತ್ತೇನೆಂದು ಬಸವರಾಜನಿಗೆ ಹೇಳಿದನು. ಬಸವರಾಜನಿಗೆ ಆದಂತಹ ಗಾಯಗಳಿಂದಾಗಿ ರಕ್ತ ಸೋರುತ್ತಿತ್ತು. ಕೂಡಲೇ ನಾನು ಮತ್ತು ರಂಗನಾಥ ಒಂದು ಆಟೋ ಮಾಡಿಕೊಂಡು ಆತನನ್ನು ಹೊಸದುರ್ಗದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋದೆವು. ಆ ಗಲಾಟೆಯು ಮಂಜುನಾಥ ಲಾಡ್ಜ್, ಮರ್ಚೆಂಟ್ ಪೆಟ್ರೋಲ್ ಪಂಪ್ ಇರುವಂತಹ ಸ್ಥಳದಲ್ಲಿ ಹೊಸದುರ್ಗದಲ್ಲಿ ಬರುತ್ತದೆ. ಬಸವರಾಜನ ಶರ್ಟಿಗೆ ರಕ್ತ ಹತ್ತಿತ್ತು. ಬ್ಲೇಡ್ ಹಾಕಿದ ಜಾಗದಲ್ಲಿ ಶರ್ಟು ಹರಿದಿತ್ತು. ಅಲ್ಲದೇ ಆ ಸ್ಥಳದಲ್ಲಿ ಬಸವರಾಜನ ಚಪ್ಪಲಿ ಬಿದ್ದಿತ್ತು. ಶರ್ಟು ಹಾಗೂ ಚಪ್ಪಲಿಯನ್ನು ನೋಡಿದರೆ ಗುರುತಿಸಬಲ್ಲೆ. ಅವುಗಳನ್ನು ನೋಡುತ್ತಿದ್ದು ಮುದ್ದೆ ಮಾಲು **1** ಹಾಗೂ **2** ಎಂದು ಈಗಾಗಲೇ ಗುರುತಿಸಲಾಗಿದೆ. ತನಿಖಾಧಿಕಾರಿಗೆ ಘಟನೆಯನ್ನು ನೋಡಿದ್ದರ ಕುರಿತು ಹೇಳಿಕೆ ಕೊಟ್ಟಿದ್ದೇನೆ.

**<u>ಪಾಟೀ ಸವಾಲು:</u>** ಶ್ರೀ ಎಸ್.ಸಿ.ಆರ್. ವಕೀಲರು ಗೈರು ಹಾಜರಿದ್ದು ಆರೋಪಿತರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಾಕ್ಷಿದಾರರ ವೆಚ್ಚವನ್ನು ನೀಡುವ ಷರತ್ತಿನೊಂದಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

**<u>ದಿನಾಂಕಃ 29-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಶ್ರೀ ಎಸ್.ಸಿ.ಆರ್. ವಕೀಲರಿಂದ ಆರೋಪಿತರ ಪರವಾಗಿಃ</u>**

**2.** ಫ್ರಾಸಾ–**1** / ಬಸವರಾಜ್ ನನ್ನ ಸಂಬಂಧಿ ಎನ್ನುವುದು ನಿಜ. ನಾನು ಬಿಎ ಪದವಿಧರ. ಆರೋಪಿತರು ಆ ದಿನ ಯಾವ ವಿಚಾರವಾಗಿ ಬಸವರಾಜನೊಂದಿಗೆ ಗಲಾಟೆ ಮಾಡಿಕೊಂಡರು ಎಂದು ಗೊತ್ತಿದೆ. ಆದರೆ ಆ ವಿಚಾರವನ್ನು ನಾನು ಕೇಳಿಸಿಕೊಂಡಿಲ್ಲ. ಆರೋಪಿತರೂ ಕೂಡಾ ನನಗೆ ಸಂಬಂಧಿಕರು ಎನ್ನುವುದು ನಿಜ. ಅವರು ಎಲ್ಲಿ ವಾಸವಾಗಿದ್ದಾರೆ ಮತ್ತು ಏನು ಕೆಲಸ ಮಾಡಿಕೊಂಡಿದ್ದಾರೆಂದು ನನಗೆ ಖಚಿತವಾಗಿ ಗೊತ್ತಿಲ್ಲ ಎನ್ನುವುದು ನಿಜ. ಆ ಸ್ಥಳ ಹಿರಿಯೂರು ಮತ್ತು ಹೊಸದುರ್ಗಕ್ಕೆ ಹೋಗುವಂತಹ ಮುಖ್ಯ ರಸ್ತೆ ಎನ್ನುವುದು ನಿಜ. ಆ ಸ್ಥಳದಲ್ಲಿ ಬಸ್ ನಿಲ್ದಾಣ**,** ಅರಣ್ಯ ಇಲಾಖೆ ಕಛೇರಿ**,** ಬಾರ್ ಅಂಡ್ ರೆಸ್ಟೋರೆಂಟ್ ಹಾಗೂ ಬೀಡಾ ಅಂಗಡಿಗಳು ಇವೆ ಎನ್ನುವುದು ನಿಜ. ಆ ದಿನ ನಾನು ಆ ಗಲಾಟೆಯಾದ ಸ್ಥಳದಿಂದ ಸುಮಾರು **500** ಮೀ ದೂರದಲ್ಲಿದ್ದೆ. ನಾನು ಆ ಗಲಾಟೆಯನ್ನು ಬಿಡಿಸಲು ಪ್ರಯತ್ನಿಸಿಲ್ಲ. ಆ ದಿನ ಬಸವರಾಜನನ್ನು **3** ನೇ ಆರೋಪಿ ಹಿಡಿದುಕೊಂಡಿದ್ದಳು. ಆ ದಿನ ನಾನು ಆಟೋದಲ್ಲಿ ಬಸವರಾಜನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಆಟೋ ಚಾರ್ಜನ್ನು ನಾನೇ ಕೊಟ್ಟಿದ್ದು ಆದರೆ ಆಟೋ ನಂಬರ್ ಗೊತ್ತಿಲ್ಲ. ಆ ಸ್ಥಳದಿಂದ ಸರ್ಕಾರಿ ಆಸ್ಪತ್ರೆ ಸುಮಾರು ಅರ್ಧ ಕಿಮೀ ದೂರದಲ್ಲಿದೆ. ಸಮೀಪದಲ್ಲೇ ಜ್ಯೋತಿ ಥಿಯೇಟರ್ ಬಳಿ ಇದ್ದಂತಹ ಡಾ. ಮಲ್ಲೇಶಪ್ಪ ಇವರ ದವಾಖಾನೆಯಲ್ಲಿ ಬಸವರಾಜನಿಗೆ ಪ್ರಥಮ ಚಿಕಿತ್ಸೆ ಕೊಡಿಸಲು ಪ್ರಯತ್ನಿಸಿಲ್ಲ.

**3.** ಪೊಲೀಸರು ನನ್ನನ್ನು ಸ್ಥಳ ಮಹಜರ್ ಕಾಲಕ್ಕೆ ಕರೆಸಿಲ್ಲ ಮತ್ತು ನನ್ನ ಸಹಿಯನ್ನು ಪಡೆದಿಲ್ಲ. ಆ ದಿನ ನನ್ನ ಕೈಗೆ ಬಸವರಾಜನ ರಕ್ತ ಏನೂ ಹತ್ತಿಲ್ಲ. ಆ ದಿನ ಆಕಾಶ ಬಣ್ಣದ ಶರ್ಟನ್ನು ಆತ ಧರಿಸಿದ್ದ. ನನಗೆ ಪೊಲೀಸರು ನೋಟೀಸನ್ನು ಕೊಟ್ಟು ಕರೆಸಿ ವಿಚಾರಣೆ ಮಾಡಿಲ್ಲ.

ಮುದ್ದೆ ಮಾಲು **2** ಚಪ್ಪಲಿ ಬಸವರಾಜನಿಗೆ ಸಂಬಂಧಿಸಿದ್ದು. ನನ್ನ ಸಮಕ್ಷಮ ಬ್ಲೇಡನ್ನು ಪೊಲೀಸರು ಅಮಾನತ್ತುಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ನಾನು ಜೋಡಿಶ್ರೀರಾಂಪುರ ಗೊಲ್ಲರಹಟ್ಟಿಯಲ್ಲಿ ವಾಸವಾಗಿದ್ದು ಆರೋಪಿತರು ಮಸಳಿಹಳ್ಳಿ ಗೊಲ್ಲರಹಟ್ಟಿಯವರು ಎನ್ನುವುದು ನಿಜ. ಅವರ ಊರಿಗೂ ನಮ್ಮ ಊರಿಗೂ ಸುಮಾರು ಅಂತರ ಎನ್ನುವುದು ನಿಜ. ಆರೋಪಿತರ ಕುಟುಂಬಕ್ಕೂ ಮತ್ತು ಬಸವರಾಜನ ಕುಟುಂಬಕ್ಕೂ ಹಿಂದೆ ಹಲವಾರು ಸಾರಿ ಗಲಾಟೆಗಳಾಗಿವೆ ಎನ್ನುವುದು ನಿಜ.

**4.** ದಿನಾಂಕ **07–11–2022** ರಂದು ನಾನು **4.30** ರ ಸುಮಾರಿಗೆ ಕೃತ್ಯ ನಡೆದ ಸ್ಥಳದಲ್ಲಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ಬಸವರಾಜನನ್ನು ಆಟೋದಲ್ಲಿ ಕರೆದುಕೊಂಡು ಆಸ್ಪತ್ರೆಗೆ ಹೋಗಿ ಸೇರಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ಘಟನೆಯಲ್ಲಿ ಬಸವರಾಜನಿಗೆ ಬ್ಲೇಡ್ ಹಾಕಲಾಗಿತ್ತು ಮತ್ತು ಆ ಭಾಗದಲ್ಲಿ ಆತನ ಶರ್ಟು ಹರಿದಿದ್ದು ಮತ್ತು ಆ ಶರ್ಟಿಗೆ ರಕ್ತ ತಗಲಿತ್ತು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಆ ಬಸವರಾಜ್ ಕುಡಿದ ಮತ್ತಿನಲ್ಲಿ ಬಂದು ಬಿದ್ದಿದ್ದ ಆ ವಿಚಾರ ನನಗೆ ಗೊತ್ತು ಎನ್ನುವುದು ಸರಿಯಲ್ಲ. ದಿನಾಂಕ **29–11–2025** ರಂದು ನಾನು ಬಸವರಾಜ್ ಹೇಳಿಕೊಟ್ಟಂತೆ ಮುಖ್ಯ ವಿಚಾರಣೆಯಲ್ಲಿ ಸಾಕ್ಷ್ಯ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 97/2023

ಪಿಡಬ್ಲ್ಯೂ: 01
ಸಿಡಬ್ಲ್ಯೂ: 01

**ದಿನಾಂಕಃ 29-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಬಸವರಾಜ್ |
| ತಂದೆಯ ಹೆಸರು | : ತಿಮ್ಮಪ್ಪ |
| ವಯಸ್ಸು | : 35 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ ಸ್ಥಳ | : ಮಸ್ತಿಹಳ್ಳಿ ಗೊಲ್ಲರಹಟ್ಟಿ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ–**4** / ಶಿವಲಿಂಗಪ್ಪ ಜೋಡಿಶ್ರೀರಾಂಪುರ ಗೊಲ್ಲರಹಟ್ಟಿ ಊರಿನವರು. ಚಾಸಾ–**5**/ ರಂಗನಾಥ ದೇವಿಪುರ ಬೋವಿಹಟ್ಟಿಯವರು. **1** ನೇ ಆರೋಪಿ ನನ್ನ ದೊಡ್ಡಪ್ಪನ ಮಗ ಮತ್ತು ಆತ ನನಗೆ ಅಣ್ಣನಾಗಬೇಕು. **2** ನೇ ಆರೋಪಿ ಆತನ ಮಗಳು. **3** ನೇ ಆರೋಪಿ **1** ನೇ ಆರೋಪಿತನ ತಾಯಿ. ದಿನಾಂಕ **07–11–2022** ರಂದು ಮದ್ಯಾಹ್ನ **3.30** ಗಂಟೆಗೆ ನಾನು ತರಕಾರಿ ತೆಗೆದುಕೊಂಡು ಹೊಸದುರ್ಗದ ಹಿರಿಯೂರು ಸರ್ಕಲ್ ನಲ್ಲಿ ಬಸ್ಸಿಗಾಗಿ ಕಾಯುತ್ತಿದ್ದೆ. ಆಗ ಊರಲ್ಲಿ ನಡೆದ ಪಂಚಾಯಿತಿ ವಿಷಯವಾಗಿ ನನ್ನ ಮೇಲೆ ದ್ವೇಷ ಇಟ್ಟುಕೊಂಡು **1** ರಿಂದ **3** ನೇ ಆರೋಪಿತರು ಇಷ್ಟು ದಿನದವರೆಗೆ ನೀನು ಸಿಕ್ಕಿಲ್ಲ ಇವತ್ತು ಸಿಕ್ಕಿದ್ದೀಯಾ ಎಂದು ನನ್ನ ಕೊರಳಪಟ್ಟಿ ಹಿಡಿದು ಹೊಡೆದರು. ಅಲ್ಲದೇ ನನ್ನ ಅಂಗಿಯನ್ನು ಹರಿದರು. **1** ನೇ ಆರೋಪಿ ನನ್ನ ಅಂಗಿಯನ್ನು ಹಿಡಿದು ಚಪ್ಪಲಿಯಿಂದ ನನ್ನ ಮುಖಕ್ಕೆ ಮತ್ತು ಕೈಗಳಿಗೆ ಹೊಡೆದ. **2** ನೇ ಆರೋಪಿತಳು ಕೂಡಾ ಚಪ್ಪಲಿಯಿಂದ ನನಗೆ ಹೊಡೆದಳು. **3** ನೇ ಆರೋಪಿ ನನ್ನ ಕೈಗಳನ್ನು ಹಿಡಿದುಕೊಂಡಳು. **1** ನೇ ಆರೋಪಿ ಬ್ಲೇಡನ್ನು ತೆಗೆದುಕೊಂಡು ನನ್ನ ಕುತ್ತಿಗೆಗೆ ಹಾಕಲು ಬಂದ**,** ನಾನು ತಪ್ಪಿಸಿಕೊಂಡಾಗ ನನ್ನ ಎಡ ಉಬ್ಬಿನ ಹತ್ತಿರ ತರಿದ ಗಾಯ ಆಯಿತು. ನಾನು ಕೆಳಗೆ ಬಿದ್ದಾಗ ನನ್ನ ಎಡಗಡೆ ಹೊಟ್ಟೆಯ ಭಾಗಕ್ಕೆ ಆ ಬ್ಲೇಡಿನಿಂದ **1** ನೇ ಆರೋಪಿ ಗಾಯಪಡಿಸಿದ. ಆಗ ಶಿವಲಿಂಗ ಮತ್ತು ರಂಗನಾಥ ಇವರುಗಳು ಬಂದರು. ಆಗ ಆರೋಪಿತರು ಇನ್ನೊಂದು ಸಾರಿ ನೀನು ಸಿಗು ನಿನ್ನನ್ನು ಮುಗಿಸೇ ಬಿಡುತ್ತೇವೆ ಈ ದಿನ ನೀನು ಬಚಾವ್ ಆಗಿದ್ದೀಯಾ ಎಂದು ಅಂದರು. ಜಗಳದಲ್ಲಿ ನನಗೆ ಸೂಳೇಮಗನೆ**,** ಬೋಳಿಮಗನೆ ಎಂದು ಬೈದರು. ಗ್ರಾಮದಲ್ಲಿ ಪಂಚಾಯಿತಿ ಕಾಲಕ್ಕೆ ನೀನು ಊರವರ ಪರವಾಗಿ ಮಾತನಾಡಿದ್ದೀಯಾ ನಿನ್ನ ಅಣ್ಣನ ಪರವಾಗಿ ಮಾತನಾಡಲಿಲ್ಲ ಎಂದು **1** ನೇ ಆರೋಪಿ ನನಗೆ ಹಲ್ಲೆ ಮಾಡಿದ. ನನ್ನ ಸಾಯಿಸಬೇಕೆಂಬ ಉದ್ದೇಶದಿಂದ ಬ್ಲೇಡಿನಿಂದ ನನ್ನ ಮೇಲೆ ಹಲ್ಲೆ ಮಾಡಲಾಯಿತು. ಆತ ಎಡಗಡೆ ಹೊಟ್ಟೆಯ ಭಾಗಕ್ಕೆ ಬ್ಲೇಡ್ ಹಾಕಿದ್ದರಿಂದ ಆ ಭಾಗದಲ್ಲಿಯ ಶರ್ಟು ಹರಿದುಹೋಯಿತು ಮತ್ತು ಅದಕ್ಕೆ ರಕ್ತ ತಗಲಿತ್ತು. ಅಲ್ಲದೇ ನನ್ನ ಎಡ ಉಬ್ಬಿನ ಮೇಲೂ

ಕೂಡಾ ರಕ್ತಗಾಯವಾಯಿತು ಮತ್ತು ಅದು ಶರ್ಟಿಗೆ ತಗಲಿತ್ತು.

**2.** ಒಂದು ಆಟೋದಲ್ಲಿ ಸದರಿ ಶಿವಲಿಂಗ ಹಾಗೂ ರಂಗನಾಥ ನನ್ನನ್ನು ಹೊಸದುರ್ಗದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಸೇರಿಸಿದರು. ಆ ಗಲಾಟೆಯಾದಾಗ ಮದ್ಯಾಹ್ನ **4.30** ಗಂಟೆಯಾಗಿತ್ತು. ಆಸ್ಪತ್ರೆಯಲ್ಲಿ ನನ್ನ ಗಾಯಗಳಿಗೆ ಹೊಲಿಗೆ ಹಾಕಲಾಯಿತು. ನಾನು ಆಸ್ಪತ್ರೆಯಲ್ಲಿದ್ದಾಗಲೇ ಪೊಲೀಸರು ಅಲ್ಲಿಗೆ ಬಂದು ನನ್ನಿಂದ ದೂರನ್ನು ಪಡೆದುಕೊಂಡರು. ಆ ದೂರನ್ನು ನೋಡುತ್ತಿದ್ದು ಅದನ್ನು ನಿಪಿ–**1** ಎಂದು ನನ್ನ ಸಹಿಯನ್ನು ನಿಪಿ–**1**(ಎ) ಎಂದು ಗುರುತಿಸಲಾಯಿತು. ಘಟನಾ ಕಾಲಕ್ಕೆ ನನ್ನ ಬಲಗಾಲಿನ ಚಪ್ಪಲಿ ಆ ಸ್ಥಳದಲ್ಲೇ ಬಿತ್ತು.

**3.** ದಿನಾಂಕ **08–11–2022** ರಂದು ಪೊಲೀಸರು ಸಂಜೆ **5.00 – 5.45** ಗಂಟೆಗೆ ಆ ಕೃತ್ಯ ನಡೆದ ಸ್ಥಳಕ್ಕೆ ಮಹಜರಿಗೆ ಬಂದಿದ್ದು ಅವರಿಗೆ ಆ ಸ್ಥಳವನ್ನು ನಾನು ತೋರಿಸಿದೆ. ಆಗ ಚಾಸಾ–**2** ಮತ್ತು **3** ಅಂದರೆ ರಂಗಪ್ಪ ಹಾಗೂ ಮಂಜುನಾಥರವರುಗಳು ಹಾಜರಿದ್ದರು. ಆ ಕಾಲಕ್ಕೆ ಪೊಲೀಸರು ನನ್ನ ಹರಿದಂತಹ ಶರ್ಟನ್ನು ಮತ್ತು ಚಪ್ಪಲಿಯನ್ನು ಆ ಸ್ಥಳದಿಂದ ಅಮಾನತ್ತುಪಡಿಸಿಕೊಂಡರು. ನಾನು ಅಲ್ಲಿ ತಯಾರಿಸಲಾದ ಮಹಜರ್ ಹಾಗೂ ನಕಾಶೆಗೆ ಸಹಿಗಳನ್ನು ಮಾಡಿದ್ದು ಮಹಜರನ್ನು ನಿಪಿ–**2** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ–**2**(ಎ) ಎಂದು**,** ನಕಾಶೆಯನ್ನು ನಿಪಿ–**3** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ–**3**(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಪೊಟೋಗಳನ್ನು ತೆಗೆಯಲಾಗಿದ್ದು ಅವುಗಳನ್ನು ನೋಡುತ್ತಿದ್ದು ಸದರಿ ಪೊಟೋಗಳನ್ನು ನಿಪಿ–**4** ಹಾಗೂ **5** ಎಂದು ಗುರುತಿಸಲಾಯಿತು. ನನ್ನ ಶರ್ಟು ಹಾಗೂ ಚಪ್ಪಲಿ ಇವುಗಳನ್ನು ನೋಡಿದರೆ ಗುರುತಿಸಬಲ್ಲೆ. (ಸೀಲು ಮಾಡಿದ ಬಟ್ಟೆಯ ಚೀಲವನ್ನ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಆರೋಪಿತರ ಸಮಕ್ಷಮ ತೆರೆಯಲಾಯಿತು.) ನನ್ನ ಶರ್ಟನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **1** ಎಂದು ಮತ್ತು ಚಪ್ಪಲಿಯನ್ನು ಮುದ್ದೆ ಮಾಲು **2** ಎಂದು ಗುರುತಿಸಲಾಯಿತು. ನನಗೆ ಹಲ್ಲೆ ಮಾಡಲು ಬಳಸಿದ ಬ್ಲೇಡನ್ನು ನೋಡಿದರೆ ಗುರುತಿಸಬಲ್ಲೆ.

**ಪಾಟೀ ಸವಾಲು:** ಶ್ರೀ ಎಸ್.ಸಿ.ಆರ್. ವಕೀಲರು ಗೈರು ಹಾಜರಿದ್ದು ಆರೋಪಿತರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಾಕ್ಷಿದಾರರ ವೆಚ್ಚವನ್ನು ನೀಡುವ ಷರತ್ತಿನೊಂದಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

**ದಿನಾಂಕಃ 29-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಸ್.ಸಿ.ಆರ್. ವಕೀಲರಿಂದ ಆರೋಪಿತರ ಪರವಾಗಿಃ**

**4.** ನಾನು **10** ನೇ ತರವತಿವರೆಗೆ ಓದಿದ್ದೇನೆ, ಆದರೆ ಪಾಸಾಗಿಲ್ಲ. ನನಗೆ ಕನ್ನಡ ಓದಲು, ಬರಯಲು ಬರುತ್ತದೆ. ನಾನು ಹಿರಿಯೂರು ರಸ್ತೆಯಲ್ಲಿರುವ ಹೆಚ್.ಪಿ. ಪೆಟ್ರೋಲ್ ಪಂಪ್ ನಲ್ಲಿ ಕೆಲಸ ಮಾಡುತ್ತೇನೆ. ಮಸ್ತಿಹಳ್ಳಿ ಗೊಲ್ಲರಹಟ್ಟಿಗೂ ಹಾಗೂ ಹೊಸದುರ್ಗಕ್ಕೂ ಸುಮಾರು **10** ಕಿಮೀ ಅಂತವಿದೆ. ನಾನು ಪ್ರತೀ ದಿನವೂ ಬಸ್ಸಿನಲ್ಲಿ ಕೆಲಸದ ಸ್ಥಳಕ್ಕೆ ಹೋಗುತ್ತೇನೆ. ನಮ್ಮ ಊರು ಹೊಸದುರ್ಗ, ಮಾಡದಕೆರೆ, ವಿವಿ ಸಾಗರ ಮತ್ತು ಹಿರಿಯೂರಿಗೆ ಹೋಗುವ ಮುಖ್ಯ ರಸ್ತೆಯಲ್ಲಿ ಬರುತ್ತದೆ ಎನ್ನುವುದು ನಿಜ. ಆರೋಪಿತರು ನಮ್ಮ ಚಿಕ್ಕದೊಡ್ಡಪ್ಪನ ಮಕ್ಕಳು. ನಮ್ಮ ತಂದೆ ಹಾಗೂ ಅವರ ತಂದೆ ಅಣ್ಣ ತಮ್ಮಂದಿರು.

**5.** ಆ ದಿನ ನಾನು ತರಕಾರಿ ತೆಗೆದುಕೊಂಡು ಹೋಗುವಾಗ ಸುಮಾರು **4.00– 4.15** ಗಂಟೆಯಾಗಿತ್ತು. ನಮ್ಮ ಪೆಟ್ರೋಲ್ ಪಂಪ್ ನಿಂದ ಮರ್ಚೆಂಟ್ ಪೆಟ್ರೋಲ್ ಪಂಪ್ ಸುಮಾರು ಒಂದು ಕಿಮೀ ದೂರದಲ್ಲಿ ಬರುತ್ತದೆ. ಸದರಿ ಮರ್ಚೆಂಟ್ ಪೆಟ್ರೋಲ್ ಪಂಪ್ ಇರುವಂತಹ ಸ್ಥಳ ಜನ ನಿಬೀಡ ಸ್ಥಳ ಎನ್ನುವುದು ನಿಜ. ಆ ಸ್ಥಳದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ, ಅರಣ್ಯ ಇಲಾಖಾ ಕಛೇರಿ, ಬಂಬೂ ಬಜಾರ್, ಬಾರ್ ಅಂಡ್ ರೆಸ್ಟೋರೆಂಟ್ ಹಾಗೂ ಬೀಡಾ ಅಂಗಡಿ ಬರುತ್ತವೆ ಎನ್ನುವುದು ನಿಜ. ಗಲಾಟೆ ಕಾಲಕ್ಕೆ ನನಗೆ ಗೊತ್ತಿದ್ದವರ ಪೈಕಿ ರಂಗಪ್ಪ ಹಾಗೂ ಶಿವಲಿಂಗಪ್ಪ ಇದ್ದರು ಮತ್ತು ಬೇರೆ ಜನ ಕೂಡಾ ಇದ್ದರು. ಊರಲ್ಲಿ ನಮ್ಮ ಮತ್ತು ಆರೋಪಿತರ ಜಮೀನುಗಳು ಅಕ್ಕಪಕ್ಕದಲ್ಲಿ ಬರುತ್ತವೆ ಎನ್ನುವುದು ನಿಜ. ಆರೋಪಿತರು ಹೊಸದುರ್ಗದಲ್ಲಿ ವಾಸವಾಗಿದ್ದು ಅವರು ತಮ್ಮ ಜಮೀನನ್ನು ಹಾಗೆಯೆ ಬಿಟ್ಟಿದ್ದಾರೆ ಎನ್ನುವುದು ಸರಿಯಲ್ಲ. ನಮ್ಮ ಜಮೀನಿನ ಸರ್ವೆ ನಂ.**15/4** ಹಾಗೂ ಆರೋಪಿತರದ್ದು ಸರ್ವೆ ನಂ.**15/3**.

**6.** ದೂರನ್ನು ಪೊಲೀಸರೇ ಬರೆದಿದ್ದಾರೆ. ನಿಪಿ–**1** ರಲ್ಲಿ ದೂರಿನ ಆರಂಭದ **2** ನೇ ಸಾಲಿನಲ್ಲಿ **03** ಎಂದು ಘಟನೆಯ ವೇಳೆಯನ್ನು ತಿದ್ದುಪಡಿ ಮಾಡಲಾಗಿದೆ ಎನ್ನುವುದು ನಿಜ. ಊರಲ್ಲಿ ಮಳೆ ಆಗಿಲ್ಲ ಎಂಬ ಕಾರಣಕ್ಕಾಗಿ ಹಬ್ಬ ಮಾಡುವ ಸಲುವಾಗಿ ಹಣವನ್ನು ಸಂಗ್ರಹಿಸುತ್ತಿದ್ದರು, ಆ ವಿಚಾರವಾಗಿ ಆರೋಪಿತರಿಗೂ ಮತ್ತು ನಮಗೂ ಮನಸ್ಥಾಪ ಬಂತು. ನಮ್ಮ ಊರಲ್ಲಿ ನಮ್ಮ ಸಮುದಾಯಕ್ಕೆ ಸೇರಿದ **25** ಮನೆಗಳಿವೆ. ಪಂಚಾಯಿತಿ ವಿಚಾರವಾಗಿ ನಮಗೂ ಅವರಿಗೂ ಮನಸ್ಥಾಪ ಇತ್ತು ಎಂದು ಮೊದಲ ಬಾರಿಗೆ ಹೇಳಿದ್ದೇನೆ ಎಂದರೆ ತಾವು ಕೇಳಿದ್ದರಿಂದ ಹೇಳಿದ್ದೇನೆ. ಪೊಲೀಸರು ನನ್ನ ಸಮಕ್ಷಮ ಬ್ಲೇಡನ್ನು ವಶಪಡಿಸಿಕೊಂಡಿರಬಹುದು. ಮುದ್ದೆ

ಮಾಲು **2** ಚಪ್ಪಲಿ ಆರೋಪಿತರಿಗೆ ಸಂಬಂಧಿಸಿದ್ದು. ಶಿವಲಿಂಗ ಹಾಗೂ ರಂಗಸ್ವಾಮಿ ನನ್ನನ್ನು ಆಸ್ಪತ್ರೆಗೆ ಸೇರಿಸಿದರು. ಆಸ್ಪತ್ರೆಯಿಂದ ಬಿಡುಗಡೆಗೊಂಡು ನಾನು ಮಹಜರಿಗೆ ಹೋಗಿದ್ದೆ. ಮಹಜರ್ ಕಾಲಕ್ಕೆ ಶಿವಲಿಂಗಪ್ಪನ ಸಹಿಯನ್ನು ಪಡೆದುಕೊಂಡಿಲ್ಲ. ಆದರೆ ಆತನ ಸಹಿಯನ್ನು ಆಸ್ಪತ್ರೆಯಲ್ಲಿ ಪಡೆದುಕೊಳ್ಳಲಾಗಿದೆ. ನಾನು ದಿನಾಂಕ **07–11–2022** ರಂದು ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ಕೇಸಿಗೆ ಅನುಕೂಲವಾಗಲೆಂದು ನನ್ನ **4–5** ಸಹಿಗಳನ್ನು ಪಡೆದುಕೊಂಡರು ಎನ್ನುವುದು ನಿಜ. ಕೃತ್ಯ ನಡೆದ ಸ್ಥಳಕ್ಕೆ ನಾನು ಇನ್ನೊಂದು ದಿನ ಸುಮಾರು ಸಂಜೆ **5.30** ಕ್ಕೆ ಹೋಗಿದ್ದೆ.

**7.** ಆ ದಿನ ಮುದ್ದೆ ಮಾಲು **2** ಆ ಸ್ಥಳದಲ್ಲಿರುವಂತಹ ಬೀಡಾ ಅಂಗಡಿಯ ಪಕ್ಕ ಇತ್ತು. ಸದರಿ ಅಂಗಡಿ ಬೆಳಗ್ಗೆ **10.30** ರಿಂದ ರಾತ್ರಿ **10.30** ರವರೆಗೆ ತೆರೆದಿರುತ್ತದೆ ಎನ್ನುವುದು ನಿಜ. ಅಲ್ಲಿ ಒಂದು ಕಸದ ತೊಟ್ಟಿಯನ್ನು ಹೊಸದುರ್ಗ ಮುನಿಸಿಪಾಲಿಟಿಯವರು ಇಟ್ಟಿದ್ದಾರೆ ಎನ್ನುವುದು ಸರಿಯಲ್ಲ. ಮಹಜರ್ ಕಾಲಕ್ಕೆ ಪೊಲೀಸರು ಬೀಡಾ ಅಂಗಡಿಯ ಮಾಲೀಕರನ್ನು ವಿಚಾರಣೆ ಮಾಡಿಲ್ಲ. ರಂಗಪ್ಪ ತಂದೆ ಎಳೆಯಪ್ಪ, ಮಂಜುನಾಥ ತಂದೆ ತಿಮ್ಮಪ್ಪ ಇವರು ನಮ್ಮ ಸಮುದಾಯದವರೇ ಎನ್ನುವುದು ನಿಜ. ನಮ್ಮ ಜಮೀನು ಹುಲ್ಲುಕಟ್ಟೆ ಹದ್ದಿಯಲ್ಲಿ ಬರುತ್ತದೆ ಎನ್ನುವುದು ಸರಿಯಲ್ಲ. ಅದು ಮಸ್ತಿಹಳ್ಳಿ ಹದ್ದಿಯಲ್ಲಿ ಬರುತ್ತಿದ್ದು ಹುಲ್ಲುಕಟ್ಟೆ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಬರುತ್ತದೆ. ಈ ಹಿಂದೆ ಕೂಡಾ ನಮಗೂ ಮತ್ತು ಆರೋಪಿತರಿಗೂ ಗಲಾಟೆಗಳು ಆಗಿವೆ ಎಂದರೆ ನಮ್ಮ ತಂದೆಯ ಕಾಲದಿಂದಲೂ ಗಲಾಟೆಗಳಾಗಿವೆ. ಆದರೆ ಆ ಗಲಾಟೆಗಳ ಬಗ್ಗೆ ನನಗೆ ಗೊತ್ತಿಲ್ಲ.

**8.** ಈಗ ಎರಡು ವರ್ಷಗಳ ಹಿಂದೆ ನಾನು **10** ರಿಂದ **15** ಜನರ ಗುಂಪು ಕಟ್ಟಿಕೊಂಡು ಬಂದು **1** ನೇ ಆರೋಪಿತನ ಮನೆಯ ಹೆಂಚುಗಳನ್ನು ಒಡೆದು ಅವರಿಗೆ ಹಲ್ಲೆ ಮಾಡಿದ್ದೆ ಮತ್ತು ಆ ವಿಚಾರವಾಗಿ ನನ್ನ ಮೇಲೆ ಕೇಸು ಕೂಡಾ ದಾಖಲಾಗಿತ್ತು ಎನ್ನುವುದು ಸರಿಯಲ್ಲ. ಆಗ ಪೊಲೀಸರು ನನ್ನನ್ನು ಕರೆಸಿ ಎಚ್ಚರಿಕೆ ನೀಡಿ ಮತ್ತೆ ಆ ರೀತಿ ನಾನು ಮಾಡಿದಲ್ಲಿ ಕ್ರಮ ಕೈಗೊಳ್ಳುವುದಾಗಿ ನನ್ನ ಕಡೆಯಿಂದ ತಪ್ಪೊಪ್ಪಿಗೆ ಪತ್ರವನ್ನು ಬರೆಸಿಕೊಂಡಿದ್ದರು ಎನ್ನುವುದು ಸರಿಯಲ್ಲ. ದಿನಾಂಕ **29–11–2025** ರಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ವಿಷಯಗಳನ್ನು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ಆರೋಪಿತರು ಯಾರೂ ಕೂಡಾ ನನ್ನ ಕೊರಳಪಟ್ಟಿಯನ್ನು ಹಿಡಿದು ಎಳೆದಾಡಿಲ್ಲ ಮತ್ತು ಚಪ್ಪಲಿಯಿಂದ ನನಗೆ ಹಲ್ಲೆ ಮಾಡಿಲ್ಲ ಎನ್ನುವುದು ಸರಿಯಲ್ಲ. ಆ ದಿನ **1** ನೇ ಆರೋಪಿ ನನ್ನ ಅಂಗಿಯನ್ನು ಹಿಡಿದು ಚಪ್ಪಲಿಯಿಂದ ನನ್ನ ಮುಖಕ್ಕೆ ಮತ್ತು ನನ್ನ ಕೈಗಳಿಗೆ ಹೊಡೆದ ಎಂಬ ವಿಚಾರವನ್ನು ಆ ದಿನವೇ ನನ್ನ ಮುಖ್ಯ ವಿಚಾರಣೆ ಕಾಲಕ್ಕೆ ಮೊದಲ ಬಾರಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ನಾನು

ಮದ್ಯಪಾನ ಮಾಡಿ **3** ಜನ ಆರೋಪಿತರಿಗೆ ಹಲ್ಲೆ ಮಾಡಿ ನಾನೇ ಆಯ ತಪ್ಪಿ ಬಿದ್ದು ಗಾಯಗೊಂಡೆ ಎನ್ನುವುದು ಸರಿಯಲ್ಲ. ಆರೋಪಿತರ ಮೇಲೆ ನನಗೆ ದ್ವೇಷವಿದ್ದು ಆ ಕಾರಣ ಅವರ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.